ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೇ ಕಾಮಗಾರಿ ನಿಧಾನವಾಗಿರುವುದರಿಂದ ಇದು ಮಂದಗತಿಯಲ್ಲಿ ಸಾಗುತ್ತಿದೆ. ಕ್ರಿಯಾಯೋಜನೆ ಬೇಗ ತಯಾರು ಮಾಡಿದರೆ ಅದು ಕಾರ್ಯಾರಂಭ ತ್ವರಿತ ಗತಿಯಲ್ಲಿ ಆಗುತ್ತದೆ. ಆದರೆ ಇವರು ಯಾವುದೇ ರೀತಿಯ ದುರುಪಯೋಗ ಮಾಡಲಿಕ್ಕೆ ನೆರವು ಸಂಸ್ಥೆಗಳಿಗೆ ಅವಕಾಶ ಇಲ್ಲ.

ಶ್ರೀ ಸಿ.ಎಂ. ಉದಾಸಿ:- ಕೆಲಸ ಮಾಡದೇ ಹಣ ಪಡೆದಿರುವಂತಾದ್ದು ಯಾವುದಾದರೂ ತಮ್ಮ ಗಮನಕ್ಕೆ ಬಂದಿದೆಯೇ?

ಡಾ. ಹೆಚ್.ಸಿ. ಮಹದೇವಪ್ಪ: ಇಲ್ಲ. ಆ ತರಹದ್ದು ಯಾವುದೂ ಇಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3703

ಸದಸ್ಯರ ಹೆಸರು : ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ(ಕುಂದಗೋಳ್)

ಉತ್ತರಿಸಬೇಕಾದ ದಿನಾಂಕ: 30.3.2005

ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ.	ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ	ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಅಡಿ ಬರುವ ರಸ್ತೆಗಳು ಒಟ್ಟು 3258 ಕಿ.ಮೀ. ಉದ್ದವಿರುತ್ತದೆ. 2004-05ನೇ ಸಾಲಿನಲ್ಲಿ ಈ ರಸ್ತೆಗಳಿಗೆ ರೂ. 205.89 ಲಕ್ಷ ಹಣವನ್ನು ಖರ್ಚು ಮಾಡಲಾಗಿದೆ. ರಸ್ತೆಗಳಿಗೆ ಖರ್ಚು ಮಾಡಿದ ವಿವರ ಕೆಳಗಿನಂತಿದೆ.

ಕ್ರ.ಸಂ.	ಲೆಕ್ಕಶೀರ್ಷಿಕೆ	ಖರ್ಚು (ರೂ. ಲಕ್ಷಗಳಲ್ಲಿ)
1	5054 ಗ್ರಾಮೀಣ ಸಂಪರ್ಕ ರಸ್ತೆಗಳು	22.60
2.	ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ	50.00
3.	ಪಿ.ಎಂ.ಜಿ.ಎಸ್.ವೈ. ಹಂತ-2 ಮತ್ತು	103.29
4.	ನಬಾರ್ಡ್ ೯-ಆರ್ ಐಡಿಎಫ್-೪	30.00
	ಒಟ್ಟು	205.89

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರಗಳು</th></tr>
<tr><td>ಆ.</td><td>2001–02,2002–03 ಮತ್ತು 2003–04ನೇ ಸಾಲಿನಲ್ಲಿ ಕುಂದಗೋಳ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ಖರ್ಚು ಮಾಡಿದ ಹಣವೆಷ್ಟು;</td><td>ಕುಂದಗೋಳ ತಾಲ್ಲೂಕಿನ ಪಂಚಾಯತ್ ರಸ್ತೆಗಳಿಗೆ 2001–02, 2002–03 ಹಾಗೂ 2003–04ನೇ ಸಾಲಿಗೆ ಈ ಕೆಳಗಿನಂತೆ ಖರ್ಚು ಮಾಡಲಾಗಿದೆ.
<table><tr><th>ವರ್ಷ</th><th>ಖರ್ಚು(ರೂ. ಲಕ್ಷಗಳಲ್ಲಿ)</th></tr><tr><td>2001–02</td><td>29.48</td></tr><tr><td>2002–03</td><td>104.30</td></tr><tr><td>2003–04</td><td>142.91</td></tr></table></td></tr>
<tr><td>ಇ.</td><td>ಪ್ರಸಕ್ತ ವರ್ಷದಲ್ಲಿ ಎಷ್ಟು ಹೊಸ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆ?</td><td>ಪ್ರಸಕ್ತ ವರ್ಷದಲ್ಲಿ ಧಾರವಾಡ ಜಿಲ್ಲೆಯಲ್ಲಿ ಹೊಸ ರಸ್ತೆಗಳನ್ನು ನಿರ್ಮಾಣ ಮಾಡಿರುವುದಿಲ್ಲ. ಹಾಲಿ ರಸ್ತೆಗಳನ್ನು ಅಭಿವೃದ್ಧಿಗೊಳಿಸುವ ಕ್ರಮ ಕೈಕೊಳ್ಳಲಾಗಿದೆ. ವಿವರಗಳು ಈ ಕೆಳಗಿನಂತಿವೆ.
<table><tr><td>1. 5054 ಗ್ರಾಮೀಣ ಸಂಪರ್ಕ ರಸ್ತೆಗಳು</td><td>41.71 ಕಿ.ಮೀ</td></tr><tr><td>2. ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ</td><td>43.50 ಕಿ.ಮೀ</td></tr><tr><td>3. ಪಿ.ಎಂ.ಜಿ.ಎಸ್.ವೈ (ಹಂತ–III)</td><td>27.90 ಕಿ.ಮೀ</td></tr><tr><td>4. ನಬಾರ್ಡ್–ಆರ್ ಐಡಿಎಫ್–IX</td><td>12.64 ಕಿ.ಮೀ</td></tr></table></td></tr>
</table>

<table>
<tr><th>SL.NO.</th><th>QUESTION</th><th>ANSWERS</th></tr>
<tr><td>1.</td><td>what is the length of Zilla Panchayat roads in Dharwad Dist? What is the amount spent for these roads during the year 2004-05?</td><td>32,58,00Kms. of village roads are under Zilla Panchayat of Dharwad District. the amount spent for these roads during the year 2004-05 is Rs. 205.89 Lakhs Details are as under
<table>
<tr><th>Sl. no</th><th>Head of Account</th><th>Amount spent (Rs in Lakhs)</th></tr>
<tr><td>1.</td><td>5054 (Grameena Samparka Raste)</td><td>22.60</td></tr>
<tr><td>2.</td><td>Mukhya Mantri Grameena Raste Abhivruddi Yojane</td><td>50.00</td></tr>
<tr><td>3.</td><td>PMGSY-Phase II&III</td><td>103.29</td></tr>
<tr><td>4.</td><td>NABARD-RIDF-VIII</td><td>30.00</td></tr>
<tr><td></td><td>Total</td><td>205.89</td></tr>
</table></td></tr>
<tr><td>2.</td><td>What is the amount spent for Zilla Panchyat roads in Kundagol Taluk during 2001-02 2002-03 ant 2003-04?</td><td>The amount spent for Zilla Panchayat roads in Kundagol taluk during 2001-02, 2002-03 and 2003-04 are as under:
<table>
<tr><th>Year</th><th>Expenditure incurred(Rs. Lakhs)</th></tr>
<tr><td>2001-02</td><td>29.48</td></tr>
<tr><td>2002-03</td><td>104.30</td></tr>
<tr><td>2003-04</td><td>142.01</td></tr>
</table></td></tr>
</table>

SL.NO.	QUESTION	ANSWERS
3.	How many new raods have been constructed during the current year?	New Roads have not been construvted in Dharwad during the current year. However improvements of roads are taken up during the current year are as follows:

1.	5054(Grameen Samparka Raste)	41.71 Km
2.	Mukhya Mantri Grameena Raste abhivruddi Yojane	43.50 Km
3.	PMGSY(Phase-III)	27.90Km
4.	NABARD-RIDF-IX	12.64 Km

(ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ ಅವರ ಪರವಾಗಿ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಪ್ರಶ್ನೆ ಕೇಳಿದರು)

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ ಇಡೀ ಧಾರವಾಡ ಜಿಲ್ಲೆಗೆ 3258 ಕಿಲೋಮೀಟರ್ ರಸ್ತೆ ಇಟ್ಟುಕೊಂಡು 2 ಕೋಟಿ ರೂಪಾಯಿ ಗ್ರ್ಯಾಂಟ್ ಕೊಟ್ಟಿದ್ದೇವೆಂದು ಇಲ್ಲಿ ಉತ್ತರ ಕೊಡುತ್ತಾರೆ. ಅದರಲ್ಲಿ ಮೈಂಟೆನೆನ್ಸ್ ಗೆ ಇರುವುದು 22 ಲಕ್ಷದ 60 ಸಾವಿರ ರೂಪಾಯಿ ಒಂದು ಕಿಲೋಮೀಟರ್‌ಗೆ ತಾವು ಎಷ್ಟು ಕೊಟ್ಟಂತೆ ಆಗುತ್ತದೆ ಎನ್ನುವುದನ್ನು ಸ್ವಲ್ಪ ನೋಡಬೇಕು.ಎರಡನೇ ಉತ್ತರ ತಾವು ಕೊಡುತ್ತೀರಿ ಏನಾದರೂ ಹೊಸ ರೋಡ್‌ಗಳನ್ನು ಮಾಡುತ್ತೀರಾ ಧಾರವಾಡ ಜಿಲ್ಲೆಗೆ ಅಂತ ಕೇಳಿದರೆ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಧಾರವಾಡ ಅಂತಹ ಒಂದು ವಿಸ್ತಾರವಾದ ಜಿಲ್ಲೆಗೆ ರೋಡು ಮಾಡುವುದಿಲ್ಲ ನೀವು, ಮೈಂಟೆನೆನ್ಸ್ ಗೆ ಗ್ರ್ಯಾಂಟ್ ಕೊಡುವುದಿಲ್ಲ ಮತ್ತೆ ಅಸೆಂಬ್ಲಿಯಲ್ಲಿ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳುವುದೂ ಬಿಡುವುದಿಲ್ಲ ಅಂದರೆ ಕೆಲಸ ಎಲ್ಲಿ ಮಾಡುತ್ತೀರಿ ಎಂದು ಹೇಳಬೇಕು. ಈ ರಸ್ತೆಗಳನ್ನು ದತರಸ್ತಿ ಮಾಡದೇ ಹೋದರೆ 3058ನ್ನು ರದ್ದು ಮಾಡಿದ್ದೀರಿ. 5054ರಲ್ಲಿ ಬರೀ 25 ಲಕ್ಷ ಕೊಡುತ್ತೇವೆಂದು ಹೇಳುತ್ತೀರಿ. ಮುಖ್ಯಮಂತ್ರಿ ಗ್ರಾಮೀಣ ರಸ್ತೆಯಲ್ಲಿ 50 ಕೊಟ್ಟು ಮಿಕ್ಕಿದ್ದು ನಬಾರ್ಡ್ ಪಿಎಂ ಜಿಎಸ್ ನಲ್ಲಿಟ್ಟು ಕೊಡುತ್ತೀರಿ ಅದನ್ನು ನೀವು ನೇರವಾಗಿ ಮಾಡುವಂತಹ ಕೆಲಸ ಅಲ್ಲ. ಬರೀ 22

ಲಕ್ಷಕ್ಕೆ 3258 ಕಿಲೋಮೀಟರ್ ರಸ್ತೆಯನ್ನು ಹೇಗೆ ಮೈಂಟೇನ್ ಮಾಡಬೇಕು? ಮತ್ತೆ ನೀವು ಹೊಸ ರೋಡ್ ತೆಗೆದುಕೊಳ್ಳದಿದ್ದರೆ ಜಿಲ್ಲೆಯ ಗತಿ ಎನು ಎಂದು ನಾನು ಕೇಳ ಬಯಸುತ್ತೇನೆ.

ಡಾ. ಹೆಚ್.ಸಿ. ಮಹದೇವಪ್ಪ: (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳತಕ್ಕಂಥ ಮಾತಲ್ಲಿ ಅರ್ಥ ಇದೆ. ಈಗ ಗ್ರಾಮೀಣ ರಸ್ತೆಗಳು ಇಡೀ ರಾಜ್ಯದಲ್ಲಿ ಸುಮಾರು ಒಂದು ಲಕ್ಷ 13 ಸಾವಿರದಷ್ಟು ಇವೆ. ಅದರಲ್ಲಿ 25 ಸಾವಿರದಷ್ಟು ರಸ್ತೆಗಳಿಗೆ ಟಾರ್ ಹಾಕಿದೆ 25 ಸಾವಿರದಷ್ಟಕ್ಕೆ ಮಣ್ಣು ರಸ್ತೆಗಳಾಗಿವೆ. ಅದನ್ನು ಮೈಂಟೇನ್ ಮಾಡಲಿಕ್ಕೆ ಆಗಲಿ ಪುನಃ ಹೆಚ್ಚು ಪ್ರಮಾಣದಲ್ಲಿ ರಸ್ತೆಗಳನ್ನು ತೆಗೆದು ಕೊಳ್ಳುವುದಕ್ಕೆ ಹಣಕಾಸಿನ ನೆರವು ಆಗಲಿ ರಾಜ್ಯ ಸರ್ಕಾರದಿಂದ ಬರುತ್ತಿರಲಿಲ್ಲ. ಈ ಸಾರಿ ಮತ್ತು ಕಳೆದ ಸಾರಿ ಸಿ.ಎಂ.ಜಿ.ಎಸ್ ನಲ್ಲಿ ರೂಪಾಯಿಯನ್ನು ಕೊಟ್ಟಿದ್ದಾರೆ. ಶಾಸಕರ ನಿಧಿಗೆ 50 ಲಕ್ಷ ಕೊಟ್ಟಿದ್ದಾರೆ. ಮತ್ತು ಇದಕ್ಕೂ ಇನ್ನೂ ಹೆಚ್ಚು ಹಣವನ್ನು ಕೊಡಬೇಕು ರಿಪೇರಿಗೆ 3054 ತೆಗೆದು ಹಾಕಿದ ಮೇಲೆ ಮೈಂಟೇನೆನ್ಸ್‌ಗೆ ದುಡ್ಡೆ ಇಲ್ಲದಿದ್ದ ಮೇಲೆ ರಸ್ತೆಗಳು ಹಾಳಾಗಿವೆ. ಅದಕ್ಕೆ ಏನಾದರೂ ಮಾಡಬೇಕು ಅಂತ ಹೇಳಿ ಮಾನ್ಯ ಹಣಕಾಸಿನ ಸಚಿವರನ್ನು ಮನವಿ ಮಾಡಿದ್ದೇನೆ. ಅದಕ್ಕೆ ಸಾಧ್ಯವಾದರೆ ಈ ಒಂದು ಮೈಂಟೇನೇನ್ಸ್‌ಗೆ ಹಿಂದೆ 3054 ಎಷ್ಟಿತ್ತು ಅದಕ್ಕೆ ಮೈಂಟೇನೆನ್ಸ್‌ಗೆ ದುಡ್ಡು ಕೊಡಬೇಕು ರೆಗ್ಯುಲರ್ ಹಣದ ಜೊತೆಗೆ ಅಂತ ಹೇಳಿ ಮಾನ್ಯ ಹಣಕಾಸಿನ ಸಚಿವರನ್ನು ಈ ಗ್ರಾಮೀಣ ಅಭಿವೃದ್ಧಿ ರಸ್ತೆಗಳಿಗೆ ಮತ್ತು ಧಾರವಾಡ ಜಿಲ್ಲೆಯಲ್ಲಿ ಕೊಟ್ಟಿರತಕ್ಕಂಥಾದ್ದು ಎರಡು ಕೋಟಿ ರೂಪಾಯಿ ಮತ್ತು ಮೈಂಟೆನೆನ್ಸ್‌ಗೆ ಕಡಿಮೆ ದುಡ್ಡು ಕೊಟ್ಟಿರುವುದು ಮತ್ತು ಹೊಸ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಕಷ್ಟ ಆಗಿದೆ ಮತ್ತು ಈ ಸಾರಿ ಅದು ಸ್ವಲ್ಪ ಹೆಚ್ಚು ಹಣ ಅಲ್ಲಿಗೆ ಲಭ್ಯ ಆಗಬಹುದು ಈ ಆಯವ್ಯಯದ ಮೇಲೆ ಸುಮಾರು ಶಾಸಕರ ನಿಧಿ ಸಿ.ಎಂ.ಜಿ.ಎಸ್ ಎರಡೂ ಸೇರಿಸಿದರೆ ಹೆಚ್ಚು ಕಡಿಮೆ ಒಂದು ಕೋಟಿ ಆಗುತ್ತದೆ. ಅದರಲ್ಲಿ ಒಂದು ಕ್ಷೇತ್ರಕ್ಕೆ ಹಣದ ನೆರವು ಆಗಬಹುದು ಅದರ ಜೊತೆಗೆ ಮೈಂಟನೆನ್ಸ್ ಗೂ ಹಣವನ್ನು ಪಡೆಯಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸ ಲಿಚ್ಚಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ ಎಂಆರ್ ಡಿ ಮತ್ತು ಡಿಡಿಆರ್ 14 ಸಾವಿರದಿಂದ 25 ಸಾವಿರ ರೂಪಾಯಿಗಳವರೆಗೂ ಮೈಂಟೇನೆನ್ಸ್ ಗ್ರ್ಯಾಂಟ್ ಕೊಡ ಬೇಕಾಗಿತ್ತು ಇಲ್ಲಿ ನಾವು ಬಜೆಟ್ ಬಹಳ ಚೆನ್ನಾಗಿದೆ ಅಂತ ಭಾಷಣ ಮಾಡಿ ಗುಂಡಿ ಮುಚ್ಚುವುದಕ್ಕೆ ದುಡ್ಡಿಲ್ಲ, ಕೆರೆಯಲ್ಲಿ ಹೂಳು ಎತ್ತುವುದಕ್ಕೆ ದುಡ್ಡಿಲ್ಲ ಈ ಸ್ಥಿತಿ

ನಿರ್ಮಾಣ ಆಗಿದೆ. 3 ಸಾವಿರ ಕಿಲೋ ಮೀಟರ್ ಇರುವಂತಹ ಒಂದು ಜಿಲ್ಲೆಗೆ 22 ಲಕ್ಷ ರೂಪಾಯಿ ನೀವು ಮೈಂಟೆನೆನ್ಸ್‌ಗೆ ಇಡುತ್ತೀರಾ ಅಂದರೆ ಎಷ್ಟು ಕಿಲೋಮೀಟರ್ ನೀವು ಗುಂಡಿ ಮುಚ್ಚಿಸಲಿಕ್ಕೆ ಆಗುತ್ತದೆ. ಕನಿಷ್ಠ ಹೇಳಿ ಹೊಸ ರಸ್ತೆ ಮಾಡಿ ಅಂದರೆ ವಿಶೇಷವಾಗಿ ಕುಂದಗೋಳ ಕ್ಷೇತ್ರದಲ್ಲಿ ಏನಾದರೂ ಹೊಸ ರಸ್ತೆಗಳನ್ನು ತೆಗೆದುಕೊಳ್ಳುತ್ತೀರಾ ಇರುವ ರಸ್ತೆಗಳಿಗೆ ದುರಸ್ತಿಗೆ ಹೆಚ್ಚುವರಿ ಹಣ ಕೊಡುತ್ತೀರಾ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇವೆ.

ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನಲ್ಲಿ ಹೊಸ ರಸ್ತೆ ಮತ್ತು ಇರುವ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ಸಿಎಂಜಿಎಸ್ ಮತ್ತು ಶಾಸಕರ ನಿಧಿಯ ಜೊತೆಗೆ ಮೇಂಟೆನೆನ್ಸ್ ಗ್ರ್ಯಾಂಟ್ ಕೊಡಬೇಕೆಂದು ಹಣಕಾಸು ಸಚಿವರಲ್ಲಿ ಮನವಿ ಮಾಡಿದ್ದೇನೆ, ಮತ್ತೆ ಅವರನ್ನು ಕೇಳಿಕೊಳ್ಳುತ್ತೇವೆ. ಈ ರಸ್ತೆಗಳೆಲ್ಲಾ ಹಳ್ಳಿಗಳಲ್ಲಿ ಹಾಳಾಗಿದ್ದಾವೆ, ಅದಕ್ಕೆ ಏನಾದರೂ ಮೆಂಟೆನ್ಸ್ ಗ್ರ್ಯಾಂಟ್ ಕೊಡಬೇಕೆಂದು ಮನವಿ ಮಾಡಿ, ಹೆಚ್ಚು ಕಡಿಮೆ ಈ ಸಾರಿ ಕುಂದಗೋಳಕ್ಕೆ ಒಂದು ಕೋಟಿ ರೂಪಾಯಿ ಬರುತ್ತದೆ, ಆ ಹಣದಲ್ಲಿ ಅವರು ಮಾಡುವುದಕ್ಕೆ ಪ್ರಯತ್ನ ಮಾಡಬಹುದು ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸಬಯಸುತ್ತೇನೆ.

ಶ್ರೀ. ಜೆ.ಸಿ. ಮಾಧುಸ್ವಾಮಿ: ವಿಶೇಷವಾಗಿ ಏನಾದರೂ ಮಾಡುತ್ತೀರಾ ಎಂದು ಕೇಳುತ್ತೇನೆ, ಅದರ ಉದ್ದೇಶ ತಮ್ಮ ಡೀಕ್ರಿಸ್‌ಶಿನರಿ ಗ್ರಾಂಟ್ ಅನ್ನು ಕೊಡುತ್ತೀರಾ?

ಡಾ. ಹೆಚ್.ಸಿ. ಮಹದೇವಪ್ಪ: ಈ ಸಾರಿ ಮುಗಿದು ಹೋಗಿದೆ ಮುಂದಿನ ಸಾರಿ ಅವಕಾಶ ಸಿಕ್ಕಾಗ ಅಕ್ಕಿಮಲ್ಲಿಕಾರ್ಜುನ ಸ್ವಾಮಿಯವರು ನನ್ನ ಸ್ನೇಹಿತರಾಗಿದ್ದಾರೆ, ಎಲ್ಲರು ಸ್ನೇಹಿತರಿದ್ದಾರೆ, ಮುಂದಿನ ಸಾರಿ ಸಹಾಯ ಮಾಡುವುದಕ್ಕೆ ನಾನು ಪ್ರಯತ್ನಿಸುತ್ತೇನೆ.

ಶ್ರೀ ಡಿ.ಸಿ. ತಮ್ಮಣ್ಣ (ಕಿರುಗಾವಲು): ಮಾನ್ಯ ಉಪಾಧ್ಯಕ್ಷರೆ, ಶಾಸಕರ ನಿಧಿಯಲ್ಲಿ ಕೊಟ್ಟಿರುವುದರಿಂದ ಗ್ರಾಮೀಣ ರಸ್ತೆಗಳ ಕೆಲಸ ಮಾಡುವುದಕ್ಕಾಗುವುದಿಲ್ಲ, ಹಳ್ಳಿಗಳಿಗೆ ಭೇಟಿ ಕೊಟ್ಟಂತ ಸಂದರ್ಭದಲ್ಲಿ ಗ್ರಾಮಗಳಲ್ಲಿರುವ ಸಣ್ಣ ಸಣ್ಣ ತೊಂದರೆಗಳನ್ನು ನಿವಾರಣೆ ಮಾಡಬೇಕಾದರು ಕೂಡ ಹಣ ಬೇಕಾಗುತ್ತದೆ. ಈಗಾಗಲೇ ಸಚಿವರು ಹೇಳಿದಂತೆ ರಾಜ್ಯದಲ್ಲಿ 1,54,000 ಕಿ.ಮೀ. ರಸ್ತೆಗಳಲ್ಲಿ 1,15,000 ಹೆಚ್ಚು ಉದ್ದ ರಸ್ತೆಗಳು ಗ್ರಾಮಾಂತರ ಪ್ರದೇಶದಲ್ಲಿವೆ. ಈಗ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಂತೆ ರಸ್ತೆಯನ್ನು ಅಭಿವೃದ್ಧಿ ಮಾಡಬೇಕಾದರೆ ಒಂದು ಕಿ.ಮೀ. ಕನಿಷ್ಠ ಪಕ್ಷ 15 ಲಕ್ಷ ರೂಪಾಯಿಗಳಾದರೂ ಬೇಕಾಗುತ್ತದೆ, ಬರಿ ರಿಪೇರಿ ಮಾಡುವುದ ರಿಂದಲೇ ಗ್ರಾಮಾಂತರ ಪ್ರದೇಶದ ರಸ್ತೆಗಳನ್ನು ನಾವು ಅಭಿವೃದ್ಧಿ ಮಾಡುವುದ ಕ್ಕಾಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ನ್ಯಾಷನಲ್ ಹೈವೇ, ಸ್ಟೇಟ್ ಹೈವೇ

ಬೇಕಾಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರುವ ಜನರು ತಮ್ಮ ಸರಕು ಸಾಗಾಣಿಕೆ ಮಾಡಬೇಕಾದರೆ ಗ್ರಾಮಾಂತರ ಪ್ರದೇಶಗಳ ರಸ್ತೆಗಳ ಅಭಿವೃದ್ಧಿ ಅವಶ್ಯಕವಾಗಿ ಆಗಬೇಕಾಗಿದೆ. ಅದಾಗಬೇಕಾದರೆ ಒಂದು ಕ್ಷೇತ್ರಕ್ಕೆ ಕನಿಷ್ಟ ಪಕ್ಷ 2–3 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಕೊಡದಿದ್ದರೆ ಇನ್ನು 50 ವರ್ಷವಾದರು ಗ್ರಾಮಾಂತರ ಪ್ರದೇಶದ ರಸ್ತೆಗಳ ಅಭಿವೃದ್ಧಿಯಾಗುವುದಿಲ್ಲ. ನಮ್ಮ ಮದ್ದೂರು ತಾಲ್ಲೂಕಿನಲ್ಲಿ 1300 ಕಿ.ಮೀ. ರಸ್ತೆ ಇದೆ. ಅದರಲ್ಲಿ 183 ಕಿ.ಮೀ. ರಸ್ತೆ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯಾಗಿದೆ, ಉಳಿದ 1100 ಕಿ.ಮೀ. ಹಳ್ಳಿಗಾಡಿನ ರಸ್ತೆ ಇದನ್ನು ಇವರು ಕೊಡುವ 1 ಕೋಟಿ ರೂಪಾಯಿಯಲ್ಲಿ ಎಷ್ಟು ವರ್ಷ ಅಭಿವೃದ್ಧಿಪಡಿಸುವುದಕ್ಕಾಗುತ್ತದೆ? ದಯಮಾಡಿ, ಮಾನ್ಯ ಮಂತ್ರಿಗಳು ಸರ್ಕಾರದ ಮೇಲೆ ಒತ್ತಾಯ ತರಬೇಕು, ಆರ್ಥಿಕ ಮಂತ್ರಿ ಮನವರಿಗೆ ಮಾಡಿಕೊಡಬೇಕು, ಕೊನೆ ಪಕ್ಷ ಒಂದು ಕ್ಷೇತ್ರಕ್ಕೆ 2–3 ಕೋಟಿ ರೂಪಾಯಿ ಗಳನ್ನು ಕೊಡದಿದ್ದರೆ, ಈ ಗ್ರಾಮಾಂತರ ಪ್ರದೇಶದ ರಸ್ತೆಗಳನ್ನು ಇನ್ನು 50 ವರ್ಷಗಳಾ ದರೂ ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ, ತಾವು ಈ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು, ಮುಖ್ಯಮಂತ್ರಿಗಳ ಮೇಲೆ ಒತ್ತಡವನ್ನು ತರಬೇಕು, ಗ್ರಾಮಾಂ ತರ ಪ್ರದೇಶಗಳ ಈ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3488
ಪ್ರಶ್ನೆ ಕೇಳಿರುವ ಸದಸ್ಯರು: ಶ್ರೀ ಶಿವಶಂಕರ ರೆಡ್ಡಿ ಎನ್.ಎಚ್.
ಉತ್ತರಿಸುವವರು: ಶ್ರೀ ಡಿ. ಮಂಜುನಾಥ್

ಪ್ರಶ್ನೆ	ಉತ್ತರ
ಅ) ಗೌರಿಬಿದನೂರು ತಾಲ್ಲೂಕಿನಲ್ಲಿ 48 ಪ್ರೌಢಶಾಲೆಗಳಿದ್ದು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ) ಇದರಿಂದ ಸಾವಿರಾರು ಬಡ ವಿದ್ಯಾರ್ಥಿಗಳು ಖಾಸಗಿ ಸಂಸ್ಥೆಗಳಿಗೆ ಹೆಚ್ಚಿನ ವಂತಿಗೆ ಶುಲ್ಕ ಭರಿಸುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;	ಗೌರಿಬಿದನೂರಿನಲ್ಲಿ ಎರಡು ಅನುದಾನಿತ ಕಾಲೇಜುಗಳಿವೆ (1) ಏ.ಇ.ಎಸ್. ನ್ಯಾಷನಲ್ ಕಾಲೇಜು 2) ಆಚಾರ್ಯ ಮಹಿಳಾ ಪ್ರಥಮ ದರ್ಜೆ ಕಾಲೇಜು